ಓ.ಎಸ್. 46/2015
ಡಿ.ಡಬ್ಲ್ಯೂಃ-2

**ದಿನಾಂಕಃ 24.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎನ್.ಜೆ. ವಕೀಲರಿಂದಃ

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಸರ್ವೆನಂ 2/3 ಬ್ರಹ್ಮದೇವರಹಳ್ಳಿ ಗ್ರಾಮಕ್ಕೆ ಸೇರಿರುತ್ತದೆ. ಸರ್ವೆ ನಂ.2/3 ರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನಮ್ಮ ಅಣ್ಣ-ತಮ್ಮಂದಿರೆಲ್ಲರೂ ಎರಡೆರಡು ಗುಂಟೆ ಹಂಚಿಕೆ ಮಾಡಿಕೊಂಡಿರುತ್ತೇವೆ, ಮುದ್ದಪ್ಪನಿಗೆ ಕೊಟ್ಟಿರುವ ಜಮೀನು ಎರಡು ಗುಂಟೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ತಮ್ಮನ ಮಗ ರಘುಪತಿ ಮತ್ತು ರಮೇಶ ಮುದ್ದಪ್ಪನಿಗೆ 2 ಗುಂಟೆ ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡಿರುವ ಸ್ವತ್ತಿಗೆ ಸಂಬಂಧಿಸಿದ ಪಹಣಿಯನ್ನು ನಾನು ನೋಡಿರುವುದಿಲ್ಲ.

**2.** ದಾವಾ ಸರ್ವೆನಂ. 2/3 ಮೂಲತಃ ನನ್ನ ತಾತ ಎ.ತಿಮ್ಮಯ್ಯನವರಿಗೆ ಸೇರಿತ್ತು. ನನ್ನ ತಾತನ ಸ್ವಾಧೀನದಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಗ್ರಾಮದ ಕಿಟ್ಟಪ್ಪನ ಮಗ ಹನುಮಯ್ಯನವರ ಪರಿಚಯ ನನಗೆ ಇರುತ್ತದೆ. ದಿನಾಂಕ 12.05.2014 ರಂದು ಹನುಮಯ್ಯನವರು ದಾವಾ ಸ್ವತ್ತನ್ನು ಗೌರಮ್ಮ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ಗೌರಮ್ಮ ಮತ್ತು ರಘುಪತಿ ದಿನಾಂಕ 30.07.2014 ರಂದು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**3.** ದಾವಾ ಸ್ವತ್ತಿನಲ್ಲಿ ಮುದ್ದಪ್ಪ ಖರೀದಿ ಮಾಡಿದ ದಿನದಿಂದ ಕಣ ಮತ್ತು ಬಣವೆ ಮಾಡಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಾವು ತಿಪ್ಪೆ ಹಾಕಿಕೊಂಡಿರುತ್ತೇವೆ ಅವರೂ ಹಾಕಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ

ನಮೂದು ಮಾಡಿರುವ ಸರ್ವೆ ನಂ. 2/4 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು 1 ಎಕರೆ 12 ಗುಂಟೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನು ರಂಗಪ್ಪನವರ ಸ್ವಾಧೀನದಲ್ಲಿರುತ್ತದೆ. ಸದರಿ ಸ್ವತ್ತು ಮುದ್ದಪ್ಪನ ಜಮೀನಿನ ದಕ್ಷಿಣಕ್ಕೆ ಇರುತ್ತದೆ. ಮುದ್ದಪ್ಪ ಮತ್ತು ರಂಗಪ್ಪನವರ ಜಮೀನುಗಳು ಅಕ್ಕ-ಪಕ್ಕದಲ್ಲಿರುತ್ತವೆ.

**4.** ದಾವಾ ಸ್ವತ್ತನ್ನು ವಾದಿ ಖರೀದಿ ಮಾಡಿದ ದಿನದಿಂದ ಸ್ವಾಧೀನದಲ್ಲಿರುತ್ತಾರೆ ಎಂದು ಗೊತ್ತಿದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ರಘುಪತಿ ಮತ್ತು ಗೌರಮ್ಮ 4 ಗುಂಟೆ ಸ್ವಾಧೀನದಲ್ಲಿದ್ದರು ಎಂದು ಸೂಚಿಸುವುದು ಸರಿಯಲ್ಲ. ಎರಡು ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂಬುದಕ್ಕೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ.

**5.** ಇಂದಿಗೂ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ವಾದಿಯ ಹೆಸರಿನಲ್ಲಿದ್ದು ಅವರೇ ಸ್ವಾಧೀನದಲ್ಲಿದ್ದರೂ ಸಹ ಪ್ರತಿವಾದಿಯ ಹೇಳಿಕೆಯ ಮೇರೆಗೆ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ